ಸಿರಿಲ್ ಎರಡು ದಿನದ ಮೇಲೆ ಮದ್ರಾಸಿಗೆ ಹೊರಟು ಹೋದ. ಸಿಸಿಲ ಟೀಚರ್ ವಾರದ ಮೇಲೆ ಪ್ರತಿ ಬೆಳಗ್ಗೆ ಎದ್ದವರೇ ಆ ಪ್ಲಾಸ್ಟಿಕ್ ತೊಟ್ಟೆಗಳ ಬಳಿ ಬಂದು ಆ ಬೀಜಗಳು ಮೊಳಕೆ ಒಡೆದವೇ ಎಂದು ನೋಡಹತ್ತಿದರು. ಆಚೆಯಿಂದ ಮಗ ಫೋನಿಸಿದಾಗಲೆಲ್ಲ ಇನ್ನೂ ಚಿಗುರು ಕಾಣಿಸುತ್ತಿಲ್ಲ ಎನ್ನುತ್ತಿದ್ದರು. ಎರಡು ವಾರದ ಮೇಲೆ ಅವುಗಳಲ್ಲಿ ಎರಡು ಬೀಜಗಳು ತಾವು ಜೀವಂತ ಇದ್ದೇವೆ ಎಂಬಂತೆ ಮೊಳಕೆ ಒಡೆದು ಬ್ರಹ್ಮಾಂಡವನ್ನು ನೋಡತೊಡಗಿದಾಗ ಅವುಗಳನ್ನು ನೋಡಿ ಆನಂದಿಸಿದ ಟೀಚರಮ್ಮ ಉಳಿದವು ಯಾಕೆ ಜೀವ ಪಡೆಯಲಿಲ್ಲ ಎಂದು ಮರುಗತೊಡಗಿದರು. ಆ ನೋವು ಎಷ್ಟಿತ್ತೆಂದರೆ ಆಕೆಗೆ ಮಗಳೇನಾದರೂ ಇದ್ದಿದ್ದರೆ ಅವಳು ಹಡೆಯದಿದ್ದರೆ ಟೀಚರಮ್ಮನಿಗೆ ಎಷ್ಟು ನೋವಾಗುತ್ತಿತ್ತೋ ಅಷ್ಟು.

ಗಿಡಗಳು ಚೆನ್ನಾಗಿ ಆಕಾಶ ನೋಡತೊಡಗಿದ ಮೇಲೆ, ಆ ಎರಡರಲ್ಲಿ ಒಂದನ್ನು ಮಾತ್ರ ತಾನು ನೆಡುವುದು ಇನ್ನೊಂದನ್ನು ಯಾರಿಗೆ ಕೊಡುವುದು ಎಂದು ಟೀಚರಮ್ಮ ತರ್ಕಿಸತೊಡಗಿದರು. ದೇವಸ್ಥಾನಕ್ಕೆ ಕೊಟ್ಟರೆ ಚರ್ಚಿನವರಿಗೆ, ಚರ್ಚಿಗೆ ಕೊಟ್ಟರೆ ದೇವಸ್ಥಾನದವರಿಗೆ ಅಥವಾ ಇವೆರಡನ್ನೂ ಮೀರಿ ಶಾಲೆಗೇ ಒಂದನ್ನು ಕೊಟ್ಟರೆ, ಅದೂ ಚೆನ್ನಾಗಿರುವುದಿಲ್ಲ ಎಂದುಕೊಂಡು ಆಕೆ 'ಏನು ಮಾಡಲಿ?' ಎಂದು ಮಗನಲ್ಲೇ ಈ ಸಮಸ್ಯೆಯನ್ನು ಮುಂದಿಟ್ಟರು. ಆತ ಈಗ ನೀವು 'ಯಾರಿಗೂ ಗಿಡ ಕೊಡುವುದು ಬೇಡ! ನಮ್ಮ ಜಮೀನಿನಲ್ಲೇ ಎರಡನ್ನೂ ನೆಟ್ಟು ಬಿಡಿ' ಎಂದ. 'ಅದೇ ಸರಿ' ಎಂದು ಆಕೆ ಮಳೆಗಾಲ ಹೋಗುವ ಸಮಯದಲ್ಲಿ ತೋಟದಲ್ಲಿದ್ದ ಎರಡು ಬಾಳೆ ಹಿಂಡುಗಳನ್ನು ಕಿತ್ತು ಅಲ್ಲಿ ಆ ಎರಡೂ ಗಿಡಗಳನ್ನು ನೆಡಲು ವ್ಯವಸ್ಥೆ ಮಾಡಿದರು. ಆ ಹೊತ್ತಿಗೆ ಹತ್ತು ವರುಷಕ್ಕೂ ಮಿಕ್ಕಿ ಟೀಚರನ್ನು ತಮ್ಮ ಮನೆಯ ಔಟ್‌ಹೌಸ್‌ನಲ್ಲಿ ಬಾಡಿಗೆಗೆ ಇರಿಸಿಕೊಂಡಿದ್ದ ಸೇವಂತಿಯಕ್ಕ ದಿಢೀರನೆ ಪ್ರತ್ಯಕ್ಷಳಾಗಿ 'ಇದೇನು ಕೃಷಿ ಕಾರ್ಯ ಟೀಚರಮ್ಮ?' ಎಂದು ಪ್ರಶ್ನಿಸಿದರು. ಆಗ ಟೀಚರ್ ಮಾವಿನಹಣ್ಣಿನ ವೃತ್ತಾಂತವನ್ನು ಆಕೆಗೆ ವಿವರಿಸಿ 'ಯಾರಿಗಾದರೂ ಒಂದು ಗಿಡ ಕೊಡುವ ಎಂದುಕೊಂಡಿದ್ದೆ. ಆದರೆ ಅದು ಬೇಡ ಎಂದು ಈಗ ನನ್ನ ಅನಿಸಿಕೆ' ಎಂಬುದನ್ನೆಲ್ಲ ಮತ್ತೆ ಹೇಳಿ 'ಮಗನ ಅಭಿಪ್ರಾಯದಂತೆ ಈಗ ನಾನೇ ಎರಡನ್ನೂ ನೆಡುತ್ತಿದ್ದೇನೆ' ಎಂದರು. ಸೇವಂತಿ ಅಕ್ಕ 'ಅಯ್ಯೋ ದೇವರೇ, ನಿಮಗೆ ನಾನು ಊರಲ್ಲಿ ಇದ್ದೇನೆ ಎಂದು ನೆನಪಾಗದಿದ್ದದ್ದು ಆಶ್ಚರ್ಯ' ಎಂದು ಟೀಚರಮ್ಮನನ್ನು ನಯವಾಗಿ ಟೀಕಿಸಿದರು. ಆಗ ಟೀಚರಮ್ಮನಲ್ಲಿ ಆಕೆಯನ್ನು ಸಮಾಧಾನಿಸುವ ಮಾತುಗಳಿರಲಿಲ್ಲವಾದರೂ ಸೇವಂತಿ ಅಕ್ಕನಿಗೆ 'ನೀವು ದೇವಸ್ಥಾನ ಅಥವಾ ಚರ್ಚ್ ಇಲ್ಲವೇ ಶಾಲೆಗಿಂತಲೂ ದೊಡ್ಡವರಲ್ಲ' ಎಂದು ಹೇಳಬೇಕೆನಿಸಿದರೂ ಹಾಗೆ ಹೇಳದೇ ಏನು ಹೇಳುವುದು? ಎಂಬ ಪ್ರಶ್ನೆಯನ್ನು ಟೀಚರ್ ಸೇವಂತಿ ಅಕ್ಕನಿಗೆ ಹಾಕಿದರು. ಆಗ ಸೇವಂತಿ ಅಕ್ಕ 'ಅವನಿಗೆ ನಾನೇ ಹೇಳುತ್ತೇನೆ ಬಿಡಿ ಟೀಚರ್. ನಾನು ಆಡಿಸಿದ ಮಗುವಲ್ಲವೇ ಆತ. ನಾನು ಬೇಕಾದರೆ ಈಗಲೂ ಅವನ ಕಿವಿ ಹಿಂಡಿಯೇನು. ನಮ್ಮ ಔಟ್‌ಹೌಸಿನಲ್ಲೇ ಬೆಳೆದ ಹುಡುಗ ಅವನು. ಖಂಡಿತ ಕೆಟ್ಟವನಲ್ಲ' ಎಂದು ಟೀಚರ್ ಮಾತು ಮುಂದೆ ಆಡದ ಹಾಗೆ ಮಾಡಿ ಒಂದು ಗಿಡವನ್ನು ಎತ್ತಿಕೊಂಡು ನಡೆದೇ ಬಿಟ್ಟರು.

ಟೀಚರಮ್ಮನಿಗೆ ದುಃಖವಾಯಿತು. ಆದರೆ ಸೇವಂತಿ ಅಕ್ಕ ತನ್ನನ್ನು ಹತ್ತು ವರುಷಕ್ಕೂ ಮಿಕ್ಕಿ ಮನೆಯಲ್ಲಿಟ್ಟುಕೊಂಡಿದ್ದರು ಎಂಬ ನೆನಪಿನ ಜೊತೆ ವಿಧವೆಯಾಗಿದ್ದ ತನ್ನ ಮೇಲೆ ಯಾರ ಕಣ್ಣು ಹಾಯಿಸದ ಹಾಗೆ ಆಕೆ ಕಾಪಾಡಿದ್ದರು ಎಂದುಕೊಂಡು ಸುಮ್ಮನಾದರು. ಟೀಚರಮ್ಮ ಸರ್ವೀಸಿನಲ್ಲಿದ್ದ ದಿನಗಳಲ್ಲಿ ಒಂದೆರಡು ಬಾರಿ ಆಫೀಸ್ ರೂಮಿನಲ್ಲಿ ತಾನು ಮತ್ತು